**ದಿನಾಂಕ ಃ 04.07.2024.**
**(ಸಾಕ್ಷಿಗೆ ಪ್ರಮಾಣವಚನ ಬೋದಿಸಲಾಯಿತು.)**
**ಪಿ ಡಬ್ಲ್ಯೂ - 1**

**ಮುಂದುವರೆದ ಮುಖ್ಯ ವಿಚಾರಣೆ ಃಅರ್ಜಿದಾರರ ಪರ ವಕೀಲರಿಂದ ಃ**

ನಾನು ಈ ಪ್ರಕರಣದಲ್ಲಿ 2ನೇ ಅರ್ಜಿದಾರನಾಗಿದ್ದು, ಈ ದಿನ ನಾನು ನನ್ನ ಮುಖ್ಯವಿಚಾರಣೆಯ ಭಾಗವಾಗಿ ನನ್ನ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ.

ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಶಾನೆಯನ್ನಾಗಿ ಗುರುತಿಸಬೇಕೆಂದು ಪ್ರಾರ್ಥಿಸುತ್ತೇನೆ.

ನಿಪಿ.1 ಅಂತಿಮ ಅವಾರ್ಡ್ ಆದೇಶದ ದೃಢೀಕೃತ ನಕಲು.

ನಿಪಿ.2 ಆರ್.ಟಿ.ಸಿ.ಯ ದೃಢೀಕೃತ ನಕಲು.

**(ಅರ್ಜಿದಾರರ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ 21.03.2025**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಮುಂದುವರೆದ ಮುಖ್ಯ ವಿಚಾರಣೆ ಃಅರ್ಜಿದಾರರ ಪರ ವಕೀಲರಿಂದ ಃ**

| | |
|---|---|
| ನಿಪಿ.3 | ಪರಿಹಾರ ಲೆಕ್ಕಾಚಾರದ ದೃಢೀಕೃತ ನಕಲು. (ಅನೆಕ್ಷರ್ 1) |
| ನಿಪಿ.4 | ಬೆಳೆಯ ಆಧಾರದ ಮೇಲೆ ಪರಿಹಾರದ ಲೆಕ್ಕಾಚಾರದ ದೃಢೀಕೃತ ನಕಲು. |
| ನಿಪಿ.5 | ಬೆಳೆಯ (ಮಲ್ಕಿ) ಆಧಾರದ ಮೇಲೆ ಪರಿಹಾರದ ಲೆಕ್ಕಾಚಾರದ ದೃಢೀಕೃತ ನಕಲು. |
| ನಿಪಿ.6 | ಹೆಚ್ಚುವರಿ ಅವಾರ್ಡ್ ನ ದೃಢೀಕೃತ ನಕಲು. |
| ನಿಪಿ.7 | ಅಡಿಷನಲ್ ಅವಾರ್ಡ್ ನ ದೃಢೀಕೃತ ನಕಲು. |
| ನಿಪಿ.8 | ಹೆಚ್ಚುವರಿ ಅವಾರ್ಡ್ ನ ದೃಢೀಕೃತ ನಕಲು. |
| ನಿಪಿ.9 | ಅಡಿಷನಲ್ ಅವಾರ್ಡ್ ನ ದೃಢೀಕೃತ ನಕಲು. |
| ನಿಪಿ.10 | ಪರಿಹಾರ ಲೆಕ್ಕಾಚಾರದ ದೃಢೀಕೃತ ನಕಲು. (ಅನೆಕ್ಷರ್ 1) |
| ನಿಪಿ.11 | ಬೆಳೆಯ (ಮಲ್ಕಿ) ಆಧಾರದ ಮೇಲೆ ಪರಿಹಾರದ ಲೆಕ್ಕಾಚಾರದ ದೃಢೀಕೃತ ನಕಲು. |
| ನಿಪಿ.12 | ಹೆಚ್ಚುವರಿ ಅವಾರ್ಡ್ ನ ದೃಢೀಕೃತ ನಕಲು. |
| ನಿಪಿ.13 | ಅಡಿಷನಲ್ ಅವಾರ್ಡ್ ನ ದೃಢೀಕೃತ ನಕಲು. |
| ನಿಪಿ.14 | ಬೆಳೆಯ ಆಧಾರದ ಮೇಲೆ ಪರಿಹಾರದ ಲೆಕ್ಕಾಚಾರದ ದೃಢೀಕೃತ ನಕಲು. |
| ನಿಪಿ.15 | ಹೆಚ್ಚುವರಿ ಅವಾರ್ಡ್ ನ ದೃಢೀಕೃತ ನಕಲು. |
| ನಿಪಿ.16 | ಅಡಿಷನಲ್ ಅವಾರ್ಡ್ ನ ದೃಢೀಕೃತ ನಕಲು. |
| ನಿಪಿ.17 | ಬೆಳೆಯ (ಮಲ್ಕಿ) ಆಧಾರದ ಮೇಲೆ ಪರಿಹಾರದ ಲೆಕ್ಕಾಚಾರದ ದೃಢೀಕೃತ ನಕಲು. |
| ನಿಪಿ.18 | ಹೆಚ್ಚುವರಿ ಅವಾರ್ಡ್ ನ ದೃಢೀಕೃತ ನಕಲು. |
| ನಿಪಿ.19 | ಅಡಿಷನಲ್ ಅವಾರ್ಡ್ ನ ದೃಢೀಕೃತ ನಕಲು. |
| ನಿಪಿ.20 | 1ನೇ ಅರ್ಜಿದಾರರ ಮರಣ ಪ್ರಮಾಣ ಪತ್ರ. |

| | |
|---|---|
| ನಿಪಿ.**21** | ವಂಶ ವೃಕ್ಷದ ನೋಟರೈಸ್ಡ್ ಕಾಪಿ. |

**(ಎದುರುದಾರರ ಪರ ವಕೀಲರು ಗೈರು ಹಾಜರಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ 27.06.2025**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ.ಡಬ್ಲ್ಯೂ - 1**

**ಪಾಟೀ ಸವಾಲು ಃ ಎದುರುದಾರರ ಪರ ಶ್ರೀ.ಎನ್.ಜೆ.ಕೆ., ವಕೀಲರಿಂದ ಃ**

ಸರ್ವೆ ನಂ. 161 ರಲ್ಲಿ 19 ಗುಂಟೆ ಜಮೀನನ್ನು ಪೈಪ್ ಲೈನ್ ಗಾಗಿ 2ನೇ ಎದುರುದಾರರು ತೆಗೆದುಕೊಂಡಿದ್ದು, ಆ ಸಂಬಂಧ ಪರಿಹಾರಕ್ಕಾಗಿ ಈ ಕೇಸನ್ನು ಹಾಕಿದ್ದೇನೆ. 2011 ರಲ್ಲಿ ಆ ಜಮೀನಿನ ಉಪಯೋಗದ ಹಕ್ಕನ್ನು 2ನೇ ಎದುರುದಾರರು ತೆಗೆದುಕೊಂಡಿದ್ದಾರೆ. ಈ ಸಂಬಂಧ 1ನೇ ಎದುರುದಾರರು ಕೊಟ್ಟಿದ್ದ ನೋಟಿಸನ್ನು ನಾನೇ ತೆಗೆದುಕೊಂಡಿದ್ದೇನೆ. ಆ ಜಾಗಕ್ಕೆ 1ನೇ ಎದುರುದಾರರು ಬಂದು ಅಲ್ಲಿ ಮಹಜರನ್ನು ಮಾಡಿ ನನ್ನ ರುಜು ತೆಗೆದುಕೊಂಡಿದ್ದಾರೆ ಎಂದರೆ ಸರಿ. ನಂತರ ಡಿ.ಸಿ.ಯವರು ಪರಿಹಾರ ಜಾಸ್ತಿ ಮಾಡುವ ಸಲುವಾಗಿ ಒಂದು ಸಭೆಯನ್ನು ಗ್ರಾಮಸ್ಥರು ಮತ್ತು ಮುಖಂಡರೊಂದಿಗೆ ಕರೆದಿದ್ದರು ಎನ್ನುವುದಕ್ಕೆ ಸಾಕ್ಷಿಯು ನಮ್ಮನ್ನು ಕರೆದಿಲ್ಲ ಎಂದು ಉತ್ತರಿಸಿದ್ದಾರೆ.

2. ಆ ಸಭೆಯಲ್ಲಿ ಜಮೀನಿನ ಬೆಲೆಯನ್ನು 3 ಪಟ್ಟು ಜಾಸ್ತಿ ಮಾಡಿ ಪರಿಹಾರ ಕೊಡುವುದು ಎಂದು ತೀರ್ಮಾನವಾಯಿತು ಎನ್ನುವುದು ನನಗೆ ಗೊತ್ತಿಲ್ಲ. ಆ ತೀರ್ಮಾನದಂತೆ ಹೆಚ್ಚುವರಿಯಾದ ಪರಿಹಾರವನ್ನು ನಮಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಮಗೆ ಸುಮಾರು 3 ಲಕ್ಷ ರೂ.ಗಳನ್ನು ಪರಿಹಾರವಾಗಿ ಕೊಟ್ಟಿರಬಹುದು. 2ನೇ ಎದುರುದಾರರು ಆ ಜಮೀನಿನಲ್ಲಿ ಪೈಪ್ ಲೈನನ್ನು ಹಾಕಿ ಜಾಗವನ್ನು ನಮಗೆ ಹಿಂದಿರುಗಿಸಿದ್ದಾರೆ ಎಂದರೆ ಸರಿ. ಆ ಜಮೀನಿನಲ್ಲಿ ಕೃಷಿ ಬೆಳೆಗಳನ್ನು ಬೆಳೆಯುವುದಕ್ಕೆ ತೊಂದರೆ ಇಲ್ಲ ಎಂದರೆ ಸರಿ. ಅದನ್ನು ಬಿಟ್ಟರೆ ಬೇರೆ ಏನನ್ನು ಆ ಜಮೀನಿನಲ್ಲಿ ಮಾಡುವ ಆಗಿಲ್ಲ. ನಮಗೆ ಆದ ತೊಂದರೆಗೆ ಸಾಕಷ್ಟು ಹೆಚ್ಚುವರಿ ಪರಿಹಾರವನ್ನು ನಮಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

3. ನಾನು ಹಾಕಿರುವ ಪ್ರಮಾಣ ಪತ್ರದಲ್ಲಿ ನಮಗೆ ಹೆಚ್ಚುವರಿ ಪರಿಹಾರವನ್ನು ಕೊಡುವ ಸಂಬಂಧ ದಾಖಲೆಗಳನ್ನು ಕೊಟ್ಟಿದ್ದೇನೋ ಇಲ್ಲವೋ ಮರೆತಿದ್ದೇನೆ, ನನ್ನ ಪ್ರಮಾಣ ಪತ್ರದಲ್ಲಿ ಯಾವ ಕಾರಣಕ್ಕೆ ಹೆಚ್ಚುವರಿ ಪರಿಹಾರವನ್ನು ಕೇಳುತ್ತಿದ್ದೇನೆ ಎಂದು ಹೇಳಿಲ್ಲ ಎಂದರೆ ಸರಿ. 2ನೇ ಎದುರುದಾರರು ನಾನು ಕೇಳಿರುವಂತೆ ಯಾವುದೇ ಹೆಚ್ಚುವರಿ ಪರಿಹಾರವನ್ನು ಕೊಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**